ಧೂಳಿನಿಂದಾದ ಬೆಳೆ ನಷ್ಟ ತುಂಬಿ ಕೊಡಲು ರೈತಸಂಘ ಆಗ್ರಹಿಸಿ ಪ್ರತಿಭಟನೆ

ಚೆನ್ನೈ ಕಾರಿಡಾರ್ ರಸ್ತೆಯಿಂದ ಕೆರೆ ನಾಶ

ಕೋಲಾರ: ಜಿಲ್ಲಾಧಿಕಾರಿಗಳ ಆದೇಶವನ್ನು ಗಾಳಿಗೆ ತೂರಿ ಚೆನ್ನೈ ಕಾರಿಡಾರ್ ರಸ್ತೆಯ ಅಭಿವೃದ್ಧಿಗೆ ಕೆರೆಯ ಸ್ವರೂಪವನ್ನೇ ಹಾಳು ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡು ಧೂಳಿನಿಂದ ರಸ್ತೆಯ ಅಕ್ಕಪಕ್ಕದಲ್ಲಿ ನಷ್ಟವಾಗಿರುವ ರೈತರ ಪ್ರತಿ ಎಕರೆಗೆ 5 ಲಕ್ಷ ಪರಿಹಾರ ನೀಡುವಂತೆ ಆಗ್ರಹಿಸಿ ರೈತ ಸಂಘದಿಂದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಷ್ಟವಾದ ಬೆಲೆಯೊಂದಿಗೆ ಪ್ರತಿಭಟನೆ ನಡೆಸಲಾಯಿತು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿ, ರೈತರು ಕೃಷಿ ಭೂಮಿಗೆ ಹಾಗೂ ಇಟ್ಟಿಗೆ ಕಾರ್ಖಾನೆಗೆ ಮಣ್ಣು ಬೇಕಾದರೆ ನೂರೊಂದು ಕಾನೂನು ಹೇಳುವ ಗಣಿ ಹಾಗೂ ಸಣ್ಣ ನೀರಾವರಿ ಅಧಿಕಾರಿಗಳಿಗೆ ಚೆನ್ನೈ ಕಾರಿಡಾರ್ ಗುತ್ತಿಗೆದಾರರು ಕೆರೆ ಹಾಳು ಮಾಡುತ್ತಿರುವುದು ಕಣ್ಣಿಗೆ ಕಾಣದಂತೆ ವರ್ತಿಸುತ್ತಿದ್ದಾರೆ ಎಂದು ಟೀಕಿಸಿದರು. ರಸ್ತೆ, ಕೈಗಾರಿಕೆ ಅಭಿವೃದ್ಧಿ ಹೆಸರಿನಲ್ಲಿ ರೈತರ ಕೃಷಿ ಜಮೀನನ್ನು ಬಲವಂತದಿಂದ ಕಾನೂನಿನ ಭಯ ಹುಟ್ಟಿಸಿ. ವಶಪಡಿಸಿಕೊಂಡು ಪರಿಹಾರ ನೀಡದೇ ಕಚೇರಿಗೆ ಅಲೆದಾಡಿಸುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಜಲ ಮೂಲಗಳ ಜೀವನಾಡಿಯಾದ ಕೆರೆಗಳನ್ನು ಚೆನ್ನೈ ಕಾರಿಡಾರ್ ಹೈವೆ ಅಭಿವೃದ್ಧಿ ಗುತ್ತಿಗೆದಾರರು ಸಂಪೂರ್ಣವಾಗಿ ತಮಗೆ ಇಷ್ಟಬಂದ ರೀತಿ ಮಣ್ಣು ತೆಗೆಯುವ ಮೂಲಕ ಕೆರೆಗಳನ್ನು ಹಾಳು ಮಾಡುತ್ತಿದ್ದರು ಅದನ್ನು ತಡೆಯಬೇಕಾದ ಅಧಿಕಾರಿಗಳು ನಾಪತ್ತೆಯಾಗಿದ್ದಾರೆಂದು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದರು. ಹೋರಾಟದಲ್ಲಿ ಮಹಿಳಾ ಜಿಲ್ಲಾಧ್ಯಕ್ಷ ಎ.ನಳಿನಿಗೌಡ, ಜಿಲ್ಲಾ ಕಾರ್ಯಾಧ್ಯಕ್ಷ ವಕ್ಕಲೇರಿ ಹನುಮಯ್ಯ, ಕೋಲಾರ ತಾಲೂಕು ಅಧ್ಯಕ್ಷ ಈಕಂಬಳ್ಳಿ ಮಂಜುನಾಥ, ಮಾಲೂರು ತಾಲೂಕು ಅಧ್ಯಕ್ಷ ಯಲ್ಲಣ್ಣ, ಮರಗಲ್ ಮುನಿಯಪ್ಪ, ಮುಳಬಾಗಿಲು ತಾಲೂಕು ಅದ್ಯಕ್ಷ ಯಲುವಳ್ಳಿ ಪ್ರಭಾಕರ್, ರಾಮಸಾಗರ ವೇಣುಗೋಪಾಲ್, ಸಂದೀಪ್, ಪಾರಂಡಹಳ್ಳಿ ಮಂಜುನಾಥ, ಸುರೇಶ್‌ಬಾಬು, ಮಂಗಸಂದ್ರ ತಿಮ್ಮಣ್ಣ, ಪೂವಣ್ಣ, ನಾರಾಯಣಗೌಡ, ಗೋವಿಂದಪ್ಪ, ಅಶ್ವಥಪ್ಪ, ವೆಂಕಟೇಶಪ್ಪ, ಚಂದ್ರಪ್ಪ, ತೆರ್ನಹಳ್ಳಿ ಆಂಜಿನಪ್ಪ, ಪುತ್ತೇರಿ ರಾಜು, ಗಿರೀಶ್, ಮುಂತಾದವರು ಇದ್ದರು.

ಗುತ್ತಿಗೆದಾರರ ಬೇಜವಾಬ್ದಾರಿ

ಜಿಲ್ಲಾಧ್ಯಕ್ಷ ಐತಂಡಹಳ್ಳಿ ಮಂಜುನಾಥ ಮಾತನಾಡಿ, ಚೆನ್ನೈ ಕಾರಿಡಾರ್ ರಸ್ತೆ ಕಾಮಗಾರಿಯ ಗುತ್ತಿದಾರರ ಬೇಜವಾಬ್ದಾರಿಯಿಂದ ಅಕ್ಕ ಪಕ್ಕದ ರೇಷ್ಮೆ ಟೆಮೊಟೋ ಕ್ಯಾಪ್ಸಿಕಂ ಹೂ ಬೆಳೆಗಳು ಧೂಳಿಗೆ ಸಂಪೂರ್ಣ ನಾಶವಾಗಿದ್ದು, ಲಕ್ಷಾಂತರ ನಷ್ಟವಾಗಿದೆ, ರೈತರಿಗೆ ಪರಿಹಾರ ನೀಡಿ ಎಂದು ಆಗ್ರಹಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು ಗುತ್ತಿಗೆದಾರರು ಎನ್.ಹೆಚ್.ಎ.ಐ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳ ಸಭೆ ಕರೆದು ಕೆರೆಯ ಸ್ವರೂಪವನ್ನು ಹಾಳು ಮಾಡಿರುವ ಹಾಗೂ ರೈತರ ಬೆಳೆ ನಷ್ಟವಾಗಿರುವ ಸ್ಥಳವನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಂಡು ರೈತರಿಗೆ ಕೆರೆಗಳಿಗೆ ಹಾನಿಯಾಗದ ರೀತಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

- ಅಭಿವೃದ್ಧಿ ಹೆಸರಿನಲ್ಲಿ ರೈತರ ಕೃಷಿ ಜಮೀನು ವಶ
- ಸೂಕ್ತ ಪರಿಹಾರ ನೀಡಲು ಸರ್ಕಾರಕ್ಕೆ ರೈತಸಂಘ ಆಗ್ರಹ

ಕೊಲೆ ಆರೋಪಿಗಳ ಬಂಧನ

ಶ್ರೀರಂಗಪಟ್ಟಣ: ಇತ್ತೀಚೆಗೆ ತಾಲೂಕಿನ ಕಾರೇಕುರ ಗ್ರಾಮದ ಮಹದೇವಪ್ರಸಾದ್ ಪುತ್ರ ಕೆ.ಎಂ.ಸಾಗರ್‌ರನ್ನು ಹತ್ಯೆ ಮಾಡಿ ತಲೆ ಮರೆಸಿಕೊಂಡಿದ್ದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಹೊಸಹಳ್ಳಿ ಗ್ರಾಮದ ಅಭಿ, ಸ್ವಾಮಿ, ಜಯಕುಮಾರ್ ಮತ್ತು ರಾಘವೇಂದ್ರ ಬಂಧಿತ ಆರೋಪಿಗಳು. ಆರೋಪಿಗಳ ಪತ್ತೆಗೆ ಎಸ್ಪಿ ಯತೀಶ್, ಡಿವೈಎಸ್ಪಿ ಸಂದೇಶ್ ಕುಮಾರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿದ್ದರು.

ಕ್ರೀಡೆಯಲ್ಲಿ ಮಾತ್ರ ಶಿಸ್ತು

ಮೈಸೂರು: ರಾಜ್ಯ ಸರ್ಕಾರಿ ನೌಕರರ ಮೈಸೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಗುರುವಾರ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಚಾಲನೆ ನೀಡಲಾಯಿತು. ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಂ.ಎಲ್.ರಘುನಾಥ್ ಅವರು ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಕ್ರೀಡೆಯಲ್ಲಿ ಮಾತ್ರ ನಾವು ಶಿಸ್ತನ್ನು ಕಾಣಬಹುದು ಹಾಗೂ ಕೀರ್ತಿವಂತರಾಗಬಹುದು ಎಂದು ಹೇಳಿದರು. ಕ್ರೀಡಾ ಕೂಟವನ್ನು ಪ್ರತಿ ವರ್ಷ ಸಾಂಪ್ರದಾಯಿಕವಾಗಿ ಆಚರಿಸುವರು. ರಾಜ್ಯ ಸರ್ಕಾರಿ ನೌಕರರಿಗೂ ಕೂಡ ರಾಜ್ಯ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸುವ ಅವಕಾಶವನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಯುವಜನರಿಗೆ ಸರ್ಕಾರ ಸರಿಯಾದ ಉತ್ತೇಜನ ನೀಡದೆ ಇರುವುದರಿಂದ ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತ ಹಾಗೂ ಕರ್ನಾಟಕ ಹಿಂದೆ ಉಳಿದಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಹಾಪೌರರಾದ ಸುನಂದಾ ಪಾಲನೇತ್ರ, ಜಿಲ್ಲಾಧಿಕಾರಿಗಳಾದ ಡಾ. ಬಗಾದಿ ಗೌತಮ್, ಅಪರ ಜಿಲ್ಲಾಧಿಕಾರಿಗಳಾದ ಡಾ. ಮಂಜುನಾಥಸ್ವಾಮಿ ಬಿ.ಎಸ್, ಪೊಲೀಸ್ ವರಿಷ್ಠಾಧಿಕಾರಿಗಳಾದ ಆರ್. ಚೇತನ್ ಇದ್ದರು.

ಶ್ರೀರಾಮುಲು ಮೈಸೂರು ಜಿಲ್ಲೆ ಪ್ರವಾಸ

ಮೈಸೂರು: ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾದ ಬಿ.ಶ್ರೀರಾಮುಲು ಅವರು ಮಾರ್ಚ್ 12ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಮಾರ್ಚ್ 12 ರಂದು ಶನಿವಾರ ಬೆಳಿಗ್ಗೆ 9.30 ಗಂಟೆಗೆ ಮೈಸೂರು ಜಿಲ್ಲೆಯ ಟಿ.ನರಸೀಪುರದ ಟಿ.ಬೆಟ್ಟಹಳ್ಳಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡದ ಉದ್ಘಾಟನೆಯನ್ನು ಮಾಡುವರು. ಬಳಿಕ ಬೆಳಿಗ್ಗೆ 11.30 ಗಂಟೆಗೆ ನಂಜನಗೂಡಿಗೆ ತೆರಳಿ ನಂಜುಂಡೇಶ್ವರನ ದರ್ಶನ ಪಡೆಯುವರು. ಮಧ್ಯಾಹ್ನ 12.30 ಗಂಟೆಗೆ ಮೈಸೂರು ನಗರದ ಪರಮಹಂಸನಗರ (ಶ್ರೀರಾಂಪುರ)ದ ಮೆಟ್ರಿಕ್ ಪೂರ್ವ ? ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ಉದ್ಘಾಟನೆ ಮಾಡುವರು. ಸಂಜೆ 3 ಗಂಟೆಗೆ ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ ಮಾಡಲಿದ್ದಾರೆ ಎಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರಾಗಿಗೆ ಕನಿಷ್ಠ ಬೆಂಬಲ ಬೆಲೆ ನೀಡಿ

ತಿಪಟೂರು: ರಾಜ್ಯದಲ್ಲಿ ರೈತರು ಬೆಳೆದ ಎಲ್ಲಾ ರಾಗಿಯನ್ನು ಸಂಪೂರ್ಣವಾಗಿ ಸರ್ಕಾರವು ಶೀಘ್ರವೇ ಖರೀದಿಸಬೇಕು ಮತ್ತು ರಾಗಿಯ ಕನಿಷ್ಠ ಬೆಂಬಲ ಬೆಲೆಯನ್ನು (ಒಖಿಕ) ಎಂಎಸ್‌ಪಿ ಕನಿಷ್ಠ 4000 ರೂಪಾಯಿಗಳಿಗೆ ನಿಗದಿಪಡಿಸಲು ಒತ್ತಾಯಿಸಿ ಅಖಿಲ ಭಾರತ ರೈತ-ಕೃಷಿ ಕಾರ್ಮಿಕರ ಸಂಘಟನೆಯ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ನಗರದ ಮಿನಿ ವಿಧಾನಸೌಧದ ಬಳಿಯಲ್ಲಿ ಮಂಗಳವಾರ ರಾಗಿ ಬೆಳೆ ಸಂಪೂರ್ಣ ಖರೀದಿ ಹಾಗೂ ರೂ.4 ಸಾವಿರ ಕ್ವಿಂಟಾಲ್ಗೆ ಬೆಂಬಲ ಬೆಲೆ ನಿಗಧಿ ಪಡಿಸುವಂತೆ ಆಗ್ರಹಿಸಿ ಅಖಿಲ ಭಾರತ ರೈತ-ಕೃಷಿ ಕಾರ್ಮಿಕರ ಸಂಘಟನೆ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಆರ್.ಜೆ.ಚಂದ್ರಶೇಖರ್ ಮೂಲಕ ರಾಜ್ಯಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು.

ಜಿಲ್ಲಾ ಸಂಚಾಲಕರಾದ ಎಸ್.ಎನ್.ಸ್ವಾಮಿ ಮಾತನಾಡಿ, ಕಾರ್ಪೊರೇಟ್ ಕಂಪೆನಿಗಳಿಗೆ ಸಬ್ಸಿಡಿ ಮತ್ತು ತೆರಿಗೆ ರಿಯಾಯಿತಿಗಳನ್ನು ಸರ್ಕಾರ ಯಾವುದೇ ಮಿತಿಯಿಲ್ಲದೆ ಕೊಡುತ್ತದೆ. ಆದರೆ ಬಹು ಸಂಖ್ಯಾತ ರೈತಾಪಿ ವರ್ಗಕ್ಕೆ ಮಾತ್ರ ಸಬ್ಸಿಡಿ ಕಡಿತ ಪ್ರತಿ ವರ್ಷವೂ ಯಾವುದೇ ಮಿತಿಯಿಲ್ಲದೆ ಸಾಗಿದೆ. ರಾಜ್ಯದಲ್ಲಿ ಸರಿಯಾಗಿ ಮಳೆ ಬಾರದೆ ಸತತ ಬರಗಾಲಕ್ಕೆ ತುತ್ತಾಗಿ ಒಣ ಭೂಮಿ ಪ್ರದೇಶದಲ್ಲಿ ಬೆಳೆಯುವ ರಾಗಿಯು ಸಹ ಕೈಗೆ ಬಾರದ ಪರಿಸ್ಥಿತಿಗಳನ್ನು ಎಷ್ಟು ಬಾರಿ ರೈತರು ಎದುರಿಸಿದ್ದಾರೆ. ಈ ಬಾರಿ ಮಳೆಯ ಅತಿವೃಷ್ಟಿಯಿಂದಾಗಿ ರಾಗಿ ಬೆಳೆಯಲ್ಲಿ ಸಾಕಷ್ಟು ನಷ್ಟ ಅನುಭವಿಸಿದ್ದು ಮತ್ತೊಂದು ರೀತಿಯ ಸಂಕಷ್ಟಕ್ಕೆ ಗುರಿಮಾಡಿದೆ. ಆದರೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡುವುದಾಗಿ ಹೇಳಿದ ಸರ್ಕಾರಗಳು ಪ್ರತಿ ವರ್ಷವೂ ಖರೀದಿಯಲ್ಲಿ ವಿಳಂಬ ಧೋರಣೆಯನ್ನು ಪಾಲಿಸುತ್ತಾ ಬಂದಿವೆ. ಸರ್ಕಾರವು ರೈತರಿಂದ ಖರೀದಿ ಮಾಡುವ ರಾಗಿಗೆ 20 ಕ್ವಿಂಟಾಲ್ ಮಿತಿಯನ್ನು ನಿಗದಿಪಡಿಸಿದ್ದು, ಸಣ್ಣ ರೈತರಿಂದ ಮಾತ್ರವೇ ಖರೀದಿಸುವುದಾಗಿ ಹೇಳುತ್ತದೆ. ಜೊತೆಗೆ ಇಂತಿಷ್ಟೇ ರಾಗಿ ಖರೀದಿಸುವುದಾಗಿ ನಿಗದಿಪಡಿಸಿದೆ. ಇದರಿಂದಾಗಿ ಮುಕ್ತ ಮಾರುಕಟ್ಟೆಯಲ್ಲಿ ರಾಗಿಯ ಬೆಲೆ ಶೇಕಡ 50ರಿಂದ 60ರಷ್ಟು ಬೆಲೆ ಕುಸಿದಿದೆ ಹಾಗೂ ಹೆಚ್ಚಿಗೆ ಬೆಳೆದ ರಾಗಿಯನ್ನು ಕಡಿಮೆ ದರದಲ್ಲಿ ಮಾರಲೇಬೇಕಾದ ಅನಿವಾರ್ಯ ಒತ್ತಡಕ್ಕೆ ರೈತ ಸಿಲುಕಿದ್ದಾನೆ. ಆದ್ದರಿಂದ ಕುಡಲೇ ಮನವಿಯನ್ನು ಈಡೇರಿಸಬೇಕೆಂದು ಕೇಂದ್ರ ಹಾಗೂ ರಾಜ್ಯಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ರೈತ ಕೃಷಿ- ಕಾರ್ಮಿಕರ ಸಂಘಟನೆಯ ಸಹ ಸಂಚಾಲಕ ಸಚಿನ್ ಬೊಮ್ಮಲಪುರ, ಪ್ರಸಾದ ಮಾದಿಹಳ್ಳಿ, ದಕ್ಷಿಣಮೂರ್ತಿ, ಲೋಕೇಶ್ ಭೈರನಾಯ್ಕನಹಳ್ಳಿ, ರೈತ ಮುಖಂಡರಾದ ಮನೋಹರ ಪಾಟೀಲ್, ಬಿ.ಬಿ.ಸಿದ್ದಲಿಂಗಸ್ವಾಮಿ, ಗೌರಿಶಂಕರ್ ಹೆಡಗೆರೆಹಳ್ಳಿ, ರಘು, ನಾಗರಾಜು ಹಾಲುಗೌಡಿನಕಟ್ಟೆ, ಲೋಹಿತ್ ಹಾಲ್ಕುರಿಕೆ, ಮಧು, ಹರೀಶ್, ನಾಗರಾಜು, ಯೋಗೇಶ್, ಸತೀಶ್, ಅಶ್ವತ್, ಶಿವಕುಮಾರ್ ಇದ್ದರು.

ಉಕ್ರೇನ್‌ನಿಂದ ಬಂದ ವಿದ್ಯಾರ್ಥಿಗಳಿಗೆ ಅಭಿನಂದನೆ

ಕೊರಟಗೆರೆ: ಉಕ್ರೇನ್‌ನಿಂದ ಸ್ವದೇಶಕ್ಕೆ ವಾಪಸಾದ ಪಟ್ಟಣದ ಇಬ್ಬರು ವಿದ್ಯಾರ್ಥಿಗಳನ್ನು ಶಾಸಕ ಡಾ.ಜಿ.ಪರಮೇಶ್ವರ್ ಅಭಿನಂದಿಸಿದರೆ ಪತ್ರಕರ್ತರು ವಿದ್ಯಾರ್ಥಿಗಳನ್ನು ಸಂದರ್ಶನ ಮಾಡಿ ಧೈರ್ಯ ತುಂಬಿದರು.

ಕೊರಟಗೆರೆ ಪಟ್ಟಣದ ಕಾಳಿದಾಸ ಬಡಾವಣೆ ನಿವಾಸಿಗಳಾದ ಜಾವೀದ್, ಫತೀಮಾ ದಂಪತಿ ಮಗನಾದ ತೌಕಿತ್‌ಅಹಮದ್ 3ನೇ ವರ್ಷದ ಎಂಬಿಬಿಎಸ್ ಹಾಗೂ ಸೈಯದ್‌ನವಾಜ್, ಶಬಾನಾ ದಂಪತಿ ಮಗನಾದ ಸೈಯ್ಯದ್ ನೋಮನ್ 1ನೇ ವರ್ಷದ ಎಂಬಿಬಿಎಸ್ ಪದವಿಯನ್ನು ರಾಜಧಾನಿ ಕೀವ್‌ನ ಪೊಗೋಮೆಲೆಟ್ ನಗರದ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಉಕ್ರೇನ್ ಮೇಲೆ ರಷ್ಯಾ ಬಾಂಬ್ ದಾಳಿ ನಡೆಸಿದಾಗ ಇವರು ಸುಮಾರು ದಿನಗಳ ಕಾಲ ಬಂಕರ್ ಗಳಲ್ಲಿದ್ದು ಸುಮಾರು 10 ಕಿ.ಮೀಗಳಷ್ಟು ನಡೆದು ಸ್ಲೋವೇಕಿಯಾದೇಶದ ಮುಖಾಂತರ ಭಾರತಕ್ಕೆ ಬಂದಿರುವುದಾಗಿ ತಿಳಿಸಿದರು.ಆ ಸಂಧರ್ಭದಲ್ಲಿ ಆತಂಕಕ್ಕೊಳಗಾಗಿದ್ದರೂ ಭಾರತದ ರಾಯಭಾರಿ ಅಧಿಕಾರಿಗಳ ಸೂಚನೆ ಮೇರೆಗೆ ಧೈರ್ಯದಿಂದ ಹೊರಬಂದು ದೇಶ ತಲುಪಿದೆವು ಎಂದು ಶಾಸಕರು ಅವರನ್ನು ಸಂದರ್ಶಿಸಿದ ವೇಳೆ ತಿಳಿಸಿದರು.

ನಂತರ ಶಾಸಕ ಡಾ.ಜಿ.ಪರಮೇಶ್ವರ್ ಮಾತನಾಡಿ, ಕ್ಷೇತ್ರದ ಇಬ್ಬರು ವಿದ್ಯಾರ್ಥಿಗಳು ಉಕ್ರೇನ್ ಯುದ್ಧ ಪೀಡಿತ ಪ್ರದೇಶದಿಂದ ಸುರಕ್ಷಿತವಾಗಿತಮ್ಮ ಮನೆಗೆ ಹಿಂತಿರುಗಿರುವುದು ಅತ್ಯಂತ ಸಂತೋಷ ತಂದಿದೆ, ನಾನು ಕೇರಳದ ಪ್ರವಾಸದಲ್ಲಿದ್ದರೂ ಸಹ ಈ ಇಬ್ಬರು ವಿದ್ಯಾರ್ಥಿಗಳ ಜೊತೆಗೆ ತಾಲೂಕು ತಹಸೀಲ್ದಾರರಿಂದ ಮಾಹಿತಿಯನ್ನು ಪಡೆಯುತ್ತಿದ್ದೆ. ಇವರಂತೆ ಉಕ್ರೇನ್‌ನಲ್ಲಿ ಸಿಲುಕಿರುವ ರಾಜ್ಯದ ಮತ್ತು ದೇಶದ ನಾಗರಿಕರು ಮತ್ತು ವಿದ್ಯಾರ್ಥಿಗಳು ಭಾರತಕ್ಕೆ ಸುರಕ್ಷಿತವಾಗಿ ವಾಪಸ್ ಮರಳಲಿ ಎಂದು ಕೋರಿದರು. ಈ ಸಂಧರ್ಭದಲ್ಲಿ ಶಾಸಕರೊಂದಿಗೆ ತಹಶೀಲ್ದಾರ್ ನಾಹಿದಾ ಜಮ್‌ಜಮ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೋಡ್ಲಹಳ್ಳಿ ಅಶ್ವತ್ಥನಾರಾಯಣ, ಕೃಷಿಕ ಸಮಾಜದ ಮಾಜಿ ಅಧ್ಯಕ್ಷ ಹುಲಿಕುಂಟೆ ಪ್ರಸಾದ್, ಪ.ಪಂ.ಸದಸ್ಯ ನಂದೀಶ್ ಇದ್ದರು.

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಸಿ. ಮಿಸ್. ನಂ. 62/2022

ಅಪೀಲುದಾರರು: 1. ಶ್ರೀಮತಿ ಉಷಾ ಬಿನ್ ಲೇಟ್ ಸಿದ್ದರಾಜು, ವಯಸ್ಸು ಸುಮಾರು 57 ವರ್ಷ ವಾಸ: ಹಳೇ ನೀರಿನ ಟ್ಯಾಂಕ್ ಹತ್ತಿರ, ಚಿಕ್ಕಬಿದರಕಲ್ಲು, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-560073. ಮತ್ತು ಇತರೆ ಮೂವರು -ವಿರುದ್ಧ-

ಎದುರುದಾರರು: ಮಾನ್ಯ ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ನೆಲಮಂಗಲ ತಾಲ್ಲೂಕು, ನೆಲಮಂಗಲ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರುದ **ಶ್ರೀಮತಿ ಉಷಾ ಮತ್ತು** ಇತರರು ತಮ್ಮ 1ನೇಯವರ ಅತ್ತೆಯಾದ ಮತ್ತು **2 ಮತ್ತು 3ರವರಿಗೆ ಅಜ್ಜಿಯಾದ ಮತ್ತು 4ನೇ ಯವರಿಗೆ ತಾಯಿಯಾದ ಸಿದ್ದಮ್ಮ ಕೋಂ ಲೇಟ್ ತಿಮ್ಮರಾಯಪ್ಪ** ರವರು ದಿನಾಂಕ: **18-02-2021** ರಂದು ಯರಮಂಚನಹಳ್ಳಿ ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಮರಣ ಹೊಂದಿದ್ದು ಮರಣ ದಿನಾಂಕವನ್ನು ನೋಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ಮಾಡಕೊಡಲು ಆದೇಶ ಕೋರಿ ಮೇಲ್ಕಂಡ ಮಾನ್ಯ ಗೌರವಾನ್ವಿತ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು, ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದರೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸಿದ್ದಲ್ಲಿ ದಿನಾಂಕ: **22-04-2022** ರಂದು ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಇಲ್ಲದೇ ಹೋದರೆ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ: 08-03-2022ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ, ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ.

ಅರ್ಜಿದಾರರ ಪರ ವಕೀಲರು: **ಹುಟ್ಟರಾಜು**
#42/2ಡಿ, ಸಪ್ತಗಿರಿ ನಿವಾಸ, 17ನೇ ಕ್ರಾಸ್, ರೇಣುಮ ಎಲ್ಲಮ್ಮ ದೇವಸ್ಥಾನದ ಎದುರು, ಚಿಕ್ಕಬಿದರಕಲ್ಲು, ಬೆಂಗಳೂರು ಉತ್ತರ ತಾಲ್ಲೂಕು.

IN THE COURT OF THE CIVIL JUDGE SRD TIPTUR
CMIS 18 /2022
Petitioner : Vijayamma
-V/S-
Respondent : C.M.C. Tiptur town
Paper Publication

That the above said petitioner has filed the above petition praying this Honourable court to issue direction to the respondent to enter the date of death of her mother-in-law Shivagamiyamma W/O Late Mutthugounder of 5th cross, Indiranagar, Tiptur town as 18.10.1999 in her house, Tiptur town. It's here by notified that any body is having any objections in the claim of the petitioner may appear personally or through his counsel before this Honourable court on 8 -04-2022 at 11am.

By Order of the Court
Shirestedar, Senior Civil Judge & JMFC, Tiptur
Advocate for petitioner
Tiptur Date 7-03-2022

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಸಿ. ಮಿಸ್. ನಂ. 58/2022

ಅಪೀಲುದಾರರು: 1. ಶ್ರೀಮತಿ ಜಯಮ್ಮ ಮತ್ತು ಇತರರು -ವಿರುದ್ಧ-

ಎದುರುದಾರರು: ಮಾನ್ಯ ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ನೆಲಮಂಗಲ ತಾಲ್ಲೂಕು, ನೆಲಮಂಗಲ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರುಗಳಾದ **ಶ್ರೀಮತಿ ಜಯಮ್ಮ** ಮತ್ತು ಇತರರು ರವರು **2 ಮತ್ತು 3ನೇ ಅರ್ಜಿದಾರರ ತಾಯಿಯಾದ ಅಕ್ಕಯ್ಯಮ್ಮ ಕೋಂ ಲೇಟ್ ಚಿಕ್ಕಲಕ್ಕಯ್ಯರವರು** ದಿನಾಂಕ: **20-08-2004** ರಂದು ನರಸಿಪುರ ಗ್ರಾಮ, ಮತ್ತಹಳ್ಳಿ ಪೋಸ್ಟ್, ದಾಸನಪುರ ಹೋಬಳಿ, ಬೆಂಗಳೂರು ಗ್ರಾಮಾಂತರ ತಾಲ್ಲೂಕು, ಇಲ್ಲಿ ಮರಣ ಹೊಂದಿದ್ದು ಮರಣ ದಿನಾಂಕವನ್ನು ನೋಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ಮಾಡಕೊಡಲು ಆದೇಶ ಕೋರಿ ಮೇಲ್ಕಂಡ ಮಾನ್ಯ ಗೌರವಾನ್ವಿತ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದರೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸಿದ್ದಲ್ಲಿ ದಿನಾಂಕ: **28-03-2022** ರಂದು ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಇಲ್ಲದೇ ಹೋದರೆ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ: 05-03-2022ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ, ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ.

ಅರ್ಜಿದಾರರ ಪರ ವಕೀಲರು: **ಎಸ್. ಮುನಿರಾಮಯ್ಯ**
ನಂ. 65, ಹೊನ್ನದೇವಿ ನಿಲಯ, 1ನೇ ಮುಖ್ಯರಸ್ತೆ, ಸದಶಿವನಗರ, ನೆಲಮಂಗಲ-562123.

ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ಉಪ-ವಿಭಾಗ ದೊಡ್ಡಬಳ್ಳಾಪುರ
RA(DBP):127/2021

ಅರ್ಜಿದಾರರು:ಶ್ರೀ.ಅಂಬರೀಷ್ @ ಬಸವರಾಜು.ಎಸ್
ವಿರುದ್ಧ
ಎದುರುದಾರರು: ತಹಶೀಲ್ದಾರ್ ಮತ್ತು ಇತರರು
2. ಶ್ರೀ.ಬಿ.ಚಿಕ್ಕಮುನಿಯಪ್ಪ ಬಿನ್ ಲೇಟ್ ಬಜ್ಜಣ್ಣ.
3. ಶ್ರೀ.ಬಿ.ಮೋಹನ್ ಕುಮಾರ್ ಬಿನ್ ಚಿಕ್ಕಮುನಿಯಪ್ಪ
4. ಶ್ರೀ.ಬಿ.ನಂದಕುಮಾರ್ ಬಿನ್ ಚಿಕ್ಕಮುನಿಯಪ್ಪ ಎಲ್ಲರ ವಾಸ ಮಾರುತಿನಗರ, ಗರಡಿ ಮನೆ ಪಕ್ಕ, ಲ್ಯಾಂಡ್ ಮಾರ್ಕ್, ದಿಶಾಪೈಲ್, ದೊಡ್ಡಬಳ್ಳಾಪುರ ತಾಲ್ಲೂಕು.

ಎದುರುದಾರ 2 ರಿಂದ 4 ರವರಿಗೆ ಪ್ರಕಟಣೆಯ ಮೂಲಕ ಸಮನ್ಸ್

ಮೇಲ್ಕಂಡ ಅರ್ಜಿದಾರರು, ಮೇಲ್ಕಂಡ ನ್ಯಾಯಾಲಯದಲ್ಲಿ ಅಪೀಲು ಸಂ.127/2021ರಂತ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಬಾಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.18 ಮತ್ತು 19ರ ಜಮೀನಿನ ಕುರಿತು ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ನೀವು 2 ರಿಂದ 4ನೇ ಎದುರುದಾರರಾಗಿರುತ್ತೀರಿ. ಆದುದರಿಂದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ. ಘನ ನ್ಯಾಯಾಲಯವು ನಿಮ್ಮ ಹಾಜರಾತಿಗಾಗಿ ದಿನಾಂಕ: 16.03.2022 ರಂದು 3.00 ಘಂಟೆಗೆ ನಿಗದಿಪಡಿಸಿದ ಹಾಗೂ ನೀವುಗಳು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ತಮ್ಮ ಗೈರುಹಾಜರಿಯಲ್ಲಿ ಏಕ ಪಕ್ಷೀಯವಾಗಿ ವಿಲೇಮಾಡಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ: 11.03.2022ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ.
ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಅರ್ಜಿದಾರರ ಪರ ವಕೀಲರು
ಪ್ರಣವ ಸಮ್ಮುದ್ದ
Advocate Ph-9663561938

IN THE COUT OF THE PRL CIVIL JUDGE AND JMFC AT HOSAKOTE
C. MISC. No. 334/2022

BETWEEN: 1. Sri CHANNARAYAPPA S/o Lakshmaiah, aged about 76 years, **2. SRI C RAMEGOWDA** S/o L Channarayappa, aged about 38 years, **3. SRI LAKSHAMNA**S/o L. Channarayappa, aged about 36 years, **4 SMT. A.C. RATHANAMMA** D/o L Channarayappa, aged about 40 years, All are R/at T. Agrahara Village, Bendiganahalli Post, Sulibele Hobli, Hosakote Taluk, Bengaluru Rural District-562114. **5. SMT. LAKSHAMMA,** D/o I. Channarayappa, aged about 42 years, R/at 76, Gundur Virgonagar post, Bengaluru-560049. ... **Petitioners**

AND: The Tahasildar, Registrar of Births and Death, Hosakote Taluk, Bengaluru Rural. ... **Respondent**

GENERAL PUBLIC NOTICE

Whereas the petitioners have filed the above petition for seeking an order to direct the Tahasildar, Hosakote Taluk to issue the death certificate of Late Mallamma D/o Munishamappa. The wife of Petitioner No. 1 and mother of Petitioners No. 2 to 5, Who died on 02-12-1980 in home at T, Agrahara Hosokote, the case is posted for the appearance for interested parties/publics on **22/04/2022** at 11 AM. Hence interested parties are hereby required to appear either in person or through pleader properly instructed in this behalf on **22/04/2022** at 11 AM, before the Hon'ble Principal Civil Judge and JMFC at Hosakote Bengaluru Rural District, failing which the above case will be heard and decided in your absence

Given under my hand & seal of this Court on 11-03-2022.
By order of the Court, Sheristedar, Civil Judge and JMFC Court, Hoskote.
Advocate for Petitioner: **Sunil**

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ : ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ ಸಂಖ್ಯೆ 44/2021-22
ದಿನಾಂಕ : 07/03/2022.

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ ಹಾನಗಲ್ ಮತ್ತು ರಾಣೇಬೆನ್ನೂರ ಉಪವಿಭಾಗದ ಈ ಕೆಳಗಿನ ಕಾಮಗಾರಿಗಳಿಗಾಗಿ ಕೆ.ಡ್ಬ್ಲ್ಯೂ-1,2,3& ಕೆಸಿ/5 (ಏಕ-ಲಕೋಟೆ ಮತ್ತು ದ್ವಿ-ಲಕೋಟೆ) ಪದ್ಧತಿಯಲ್ಲಿ "ಇ-ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಾಲಾಗಿದೆ. ಲೆಕ್ಕ ಶೀರ್ಷಿಕೆ:4702-ಕೆರೆಗಳ ಆಧುನಿಕರಣ ಕಾಮಗಾರಿಗಳು (ಮುಂದುವರೆದ ಪ್ರಕಟಣೆ: ಒಟ್ಟು 04 ಕಾಮಗಾರಿ), 4702-ವಿಶೇಷ ಅಭಿವೃದ್ಧಿ ಕಾಮಗಾರಿಗಳು (ಮುಂದುವರೆದ ಪ್ರಕಟಣೆ: ಒಟ್ಟು 7 ಕಾಮಗಾರಿ), 2702-ಐತ ನೀರಾವರಿ ಯೋಜನೆಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳು (ಮುಂದುವರೆದ ಪ್ರಕಟಣೆ:ಒಟ್ಟು 4 ಕಾಮಗಾರಿ), 4702-ಗಿರಿಜನ ಉಪ ಯೋಜನೆ ಕಾಮಗಾರಿಗಳು (ಮುಂದುವರೆದ ಪ್ರಕಟಣೆ:ಒಟ್ಟು 1 ಕಾಮಗಾರಿ), 4702-ಏತ ನೀರಾವರಿ ಯೋಜನೆಗಳ ಕಾಮಗಾರಿಗಳು (ಮುಂದುವರೆದ ಪ್ರಕಟಣೆ: ಒಟ್ಟು 1 ಕನ್ಸಲಟೆಂಟ್ ಕಾಮಗಾರಿ), ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ.**70.00** ಲಕ್ಷ ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ. **1.40** ಲಕ್ಷ ಮತ್ತು ಕನಿಷ್ಠ ಅಂದಾಜು ಮೊತ್ತ ರೂ **2.04** ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ. **5100/-** ಖಾಲಿ ಟೆಂಡರ್ ಫಾರಂಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: **http://eproc.karnataka.gov.in** ನಲ್ಲಿ ದಿನಾಂಕ : **10.03.2022** ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ : **15.03.2022** ರೊಳಗಾಗಿ ಅನುಮಾನಗಳಿದ್ದರೆ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ : **17.03.2022** ರ 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ/ಆರ್ಥಿಕ ಬಿಡ್‌ನ್ನು ದಿನಾಂಕ : **18.03.2022** ಸಂಜೆ 17.45 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ವಿ.ಸೂ : ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.
ವಾಸಾಸಂಇ/ಹಾವೇರಿ/ಎಂ.ಸಿ.ಎ/527/2021-22

TATA
ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.
ನೋಂದಾಯಿತವಿಳಾಸ: 11 ನೇಮಹಡಿ, ಟವರ್‌ಎ, ಪೆನಿನ್ಸುಲಾ ಬ್ಯುಸಿನೆಸ್ ಪಾರ್ಕ್, ಗಣಪತ್‌ರಾವ್ ಕದಮ್ ಮಾರ್ಗ್, ಲೋವರ್ ಪರೇಲ್, ಮುಂಬೈ - 400013.
ಶಾಖೆ ವಿಳಾಸ: ಸಂಖ್ಯೆ 82/1, ನೆಲಮಹಡಿ, ಕೃಷ್ಣಟವರ್ಸ್, ರಿಚ್‌ಮಂಡ್‌ರಸ್ತೆ, ಬೆಂಗಳೂರು - 560025.

ಸ್ಥಿರಾಸ್ತಿಗಳ ಮಾರಾಟಕ್ಕೆಮಾರಾಟಸೂಚನೆ
[2002ರ ಭದ್ರತಾಹಿತಾಸಕ್ತಿ (ಜಾರಿ) ನಿಯಮ9(1)ಅಡಿಯಲ್ಲಿ]

2002ರ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿಯಡಿ ಮತ್ತು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅಧಿನಿಯಮ9(1)ರಲ್ಲಿರುವ ನಿಬಂಧನೆಗಳನ್ನು ಓದಿಕೊಂಡಂತೆ ಸ್ಥಿರಾಸ್ತಿಗಳ ಮಾರಾಟಕ್ಕೆ ಜಾರಿಗೊಳಿಸಿರುವ ಇ-ಹರಾಜು ಮಾರಾಟ ಸೂಚನೆ.

ಸಾಮಾನ್ಯ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರ(ರು) ಮತ್ತು/ಸಹ-ಸಾಲಗಾರ, ಅಥವಾ ಅವರ ಕಾನೂನು ಉತ್ತರಾಧಿಕಾರಿಗಳು/ ಪ್ರತಿನಿಧಿಗಳಿಗೆ (ಸಾಲಗಾರರು) ಈ ನೋಟಿಸಿನ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಗಳನ್ನು ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್. (ಟಿಸಿಎಚ್‌ಎಫ್‌ಎಲ್)ಗೆಅಡಮಾನಮಾಡಲಾಗಿದ್ದು/ವಹಿಸಲಾಗಿದ್ದು, ಇವುಗಳ ಭೌತಿಕ ಸ್ವಾಧೀನತೆಯನ್ನು ಭದ್ರತಾ ಸಾಲದಾತರಾದ ಅಧಿಕೃತ ಅಧಿಕಾರಿಟಿ ಸಿಎಚ್‌ಎಫ್‌ಎಲ್ ಅವರು ಪಡೆದುಕೊಂಡಿದ್ದು, ಇವುಗಳನ್ನು "ಎಲ್ಲಿದೆಯೋ", "ಹೇಗಿದೆಯೋ", ಮತ್ತು "ಏನೇನಿದೆಯೋ" ಆಧಾರದ ಮೇಲೆ ಕೆಳಗಿನ ಸಾಲಗಾರ ಮತ್ತು ಸಹ- ಸಾಲಗಾರರಿಂದ ವಸೂಲಿ ಮಾಡುವ ಸಲುವಾಗಿ ದಿನಾಂಕ **30ನೇ ಮಾರ್ಚ್ 2022**ರಂದು ಮಾರಾಟ ಮಾಡಲಾಗುವುದು. ಮೀಸಲು ಬೆಲೆ ಮತ್ತು ಪ್ರಾರಂಭಿಕ ಠೇವಣಿ ಹಣ ಕೆಳಗೆ ಉಲ್ಲೇಖಿಸಲಾಗಿದೆ. ಈ ಮೂಲಕ ಸೂಚನೆ ನೀಡುವುದೇನೆಂದರೆ, ಯಾವುದೇ ಮುಂದೂಡಿಕೆ / ಮಾರಾಟದ ಸ್ಥಗಿತದ ಅನುಪಸ್ಥಿತಿಯಲ್ಲಿ, ಹೇಳಿದ ಭದ್ರತಾ ಆಸ್ತಿ / ಆಸ್ತಿಯನ್ನು ಇ-ಹರಾಜಿನ ಮೂಲಕ **30ನೇ ಮಾರ್ಚ್ 2022**ರಂದು ಮಧ್ಯಾಹ್ನ 2 ಗಂಟೆಗೆ ಶಾಖೆಯ ವಿಳಾಸದಲ್ಲಿ **ಟಾಟಾ ಕ್ಯಾಪಿಟಲ್ ಹೌಸಿಸಿಂಗ್ ಫೈನಾನ್ಸ್ ಲಿಮಿಟೆಡ್.**, ಸಂಖ್ಯೆ 82/1, ನೆಲಮಹಡಿ, ಕೃಷ್ಣ ಟವರ್ಸ್, ರಿಚ್‌ಮಂಡ್ ರಸ್ತೆ, ಬೆಂಗಳೂರು - 560025 ಮಾರಾಟ ಮಾಡಲಾಗುವುದು. ಇ-ಹರಾಜಿನಲ್ಲಿ ಭಾಗವಹಿಸಲು ಇಎಂಡಿಯ ಡಿಮ್ಯಾಂಡ್ ಡ್ರಾಫ್ಟ್ ಹೊಂದಿರುವುದನ್ನು **29ನೇ ಮಾರ್ಚ್2022**ರಂದು ಅಥವಾ ಮೊದಲು ಸಂಜೆ 5 ರೊಳಗೆ ಟಿಸಿಎಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿಗೆ ಸಲ್ಲಿಸಬೇಕು.

ಕೆಳಗೆ ವಿವರಿಸಿದ ಸಂಕ್ಷಿಪ್ತ ವಿವರಗಳ ಪ್ರಕಾರ ಭದ್ರತಾ ಆಸ್ತಿ/ಸ್ಥಿರಾಸ್ತಿಯ ಮಾರಾಟವು "ಹೇಗಿದೆಯೋ" ಸ್ಥಿತಿಯಲ್ಲಿ ಮೇಲೆ ಇರುತ್ತದೆ;

ಕ್ರಮ ಸಂಖ್ಯೆ	ಸಾಲ ಖಾತೆ ಸಂಖ್ಯೆ	ಸಾಲಗಾರ(ರು)/ ಸಹ-ಸಾಲಗಾರ(ರು), ಕಾನೂನು ಉತ್ತರಾಧಿಕಾರಿ(ಗಳು)/ ಕಾನೂನು ಪ್ರತಿನಿಧಿ/ ಜಾಮೀನುದಾರರ ಹೆಸರು	ಡಿಮ್ಯಾಂಡ್ ನೋಟೀಸಿನ ಪ್ರಕಾರ ಮೊತ್ತ ಮತ್ತು ಡಿಮ್ಯಾಂಡ್ ನೋಟೀಸಿನ ದಿನಾಂಕ	ಮೀಸಲು ಬೆಲೆ	ಪ್ರಾರಂಭಿಕ ಠೇವಣಿ ಹಣ
1.	9791650	ಶ್ರೀಗೋವಿಂದನ್ ಎಸ್ (ಸಾಲಗಾರ) ಮತ್ತು ಶ್ರೀಮತಿ ಶಿವಗಾಮಿ (ಸಹ-ಸಾಲಗಾರ)	20 ಸೆಪ್ಟೆಂಬರ್ 2019ರಂತೆ ರೂ.11,91,722/-	ರೂ .5,50,000/-	ರೂ .5,50,000/-

ಸ್ಥಿರಾಸ್ತಿಯವಿವರಣೆ: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ಸೈಟ್. ಸಂ .113, ಮೌಲ್ಯಮಾಪನ ಸಂಖ್ಯೆ 1052/9, ಪೂರ್ವದಿಂದ ಪಶ್ಚಿಮಕ್ಕೆ 30 ಅಡಿಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿಗಳು, ಸಂಪೂರ್ಣವಾಗಿ 1200 ಚದರ ಅಡಿ ಅಳತೆ, (ಸರ್ವೆಸಂಖ್ಯೆ 105/1 ಮತ್ತು 105/2 ರಲ್ಲಿ ನಿರ್ಮಿಸಲಾಗಿದೆ). ವಾರ್ಡ್‌ನಂ. 25, ಲಿಂಗನಪುರಗ್ರಾಮ, ಕಸಬಾಹೋಬಳಿ, ಕೊಳ್ಳೇಗಾಲಉಪವಿಭಾಗ, ಚಾಮರಾಜನಗರ ಜಿಲ್ಲೆ ಮತ್ತು ಚಕ್ಕುಬಂದಿ: ಪೂರ್ವದಿಂದ: ಸೈಟ್ ನಂ. 112, ಪಶ್ಚಿಮದಿಂದ: ಸೈಟ್ ನಂ. .114, ಉತ್ತರದಿಂದ: 20 ಅಡಿ ಸಾಮಾನ್ಯ ಮಾರ್ಗ, ದಕ್ಷಿಣದಿಂದ: ಸರ್ವೆನಂ .103/ಸಿಯಲ್ಲಿ ಸೈಟ್ ರೂಪುಗೊಂಡಿದೆ.

2.	9791912	ಶ್ರೀಗುರುರಾಜ್ ಆರ್.ವಿ. (ಸಾಲಗಾರ) ಮತ್ತು ಶ್ರೀಗುರುಮೂರ್ತಿ ಆರ್.ವಿ. (ಸಹ-ಸಾಲಗಾರ)	08 ಮೇ 2019 ರಂತೆ ರೂ. 11,67,111/-	ರೂ .6,90,000/-	ರೂ .69,000/-

ಸ್ಥಿರಾಸ್ತಿಯವಿವರಣೆ: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ಆಸ್ತಿ ಹೊಂದಿರುವ ಸೈಟ್ ಸಂಖ್ಯೆ 110, ಮೌಲ್ಯಮಾಪನ ಸಂಖ್ಯೆ 678/3016, ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 50 ಅಡಿ ಅಳತೆ ಸಂಪೂರ್ಣವಾಗಿ 2000 ಚದರ. ಅಡಿ, ಭೋವಿ ಕಾಲೋನಿ, (NGO ಬಡಾವಣೆ), ವಾರ್ಡ್ ಸಂಖ್ಯೆ 10, ಹೆಚ್.ಡಿ. ಕೋಟೆ ಟೌನ್, ಎಚ್.ಡಿ. ಕೋಟೆ ತಾಲೂಕು, ಮೈಸೂರು ಜಿಲ್ಲೆ ಮತ್ತು ಚಕ್ಕುಬಂದಿ: ಪೂರ್ವ: ಸೈಟ್ ಸಂಖ್ಯೆ 111, ಪಶ್ಚಿಮ: ರಸ್ತೆ, ಉತ್ತರ: ರಸ್ತೆ, ದಕ್ಷಿಣ: ಸೈಟ್ ಸಂಖ್ಯೆ 129.

3.	10328348	ನಿಮೋಯ್ ವಾಸನ್ ಬೆಂಗಳೂರು (ಸಾಲಗಾರ)	ರೂ. 24,06,082/- (ರೂಪಾಯಿ ಇಪ್ಪತ್ನಾಲ್ಕು ಲಕ್ಷ ಆರು ಸಾವಿರ ಎಂಭತ್ತೆರಡು ಮಾತ್ರ) ದಿನಾಂಕ: 13/03/2020	ರೂ .10,80,000/-	ರೂ .10,80,000/-

ಸ್ಥಿರಾಸ್ತಿಯ ವಿವರಣೆ: ಶೆಡ್ಯೂಲ್‌ಎ ಆಸ್ತಿ ಐಟಂಸಂಖ್ಯೆ 1: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ವಸತಿ ಖಾಲಿ ಸೈಟ್ ಸಂಖ್ಯೆ 1, ಗ್ರಾಮ ಪಂಚಾಯತ್ ಖಾತಾ ಸಂಖ್ಯೆ 399/01, ಪಿಐಡಿಸಂಖ್ಯೆ 152500900901220125, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: ಉತ್ತರದ ಕಡೆಗೆ: 09.14 ಮೀಟರ್, ಪೂರ್ವದಿಂದ ಪಶ್ಚಿಮಕ್ಕೆ: ದಕ್ಷಿಣದ ಕಡೆಗೆ: 09.78 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: ಪೂರ್ವಕ್ಕೆ: 13.61 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: ಪಶ್ಚಿಮಕ್ಕೆ: 12.19 ಮೀಟರ್, ಸಂಪೂರ್ಣವಾಗಿ 122.03 ಚದರ ಮೀಟರ್ ಅಳತೆ ಹೊಸಹಳ್ಳಿ ಗ್ರಾಮ, ಅರಕೆರೆ ಗ್ರಾಮಪಂಚಾಯತ್, ಕೋರಾಹೋಬಳಿ, ತುಮಕೂರು ತಾಲ್ಲೂಕು ಮತ್ತು ಚಕ್ಕುಬಂದಿ: ಪೂರ್ವದಿಂದ: ಪಾರ್ಕ್, ಪಶ್ಚಿಮದಿಂದ: ಸೈಟ್ ಸಂಖ್ಯೆ 2, ಉತ್ತರದಿಂದ: 30 ಅಡಿರಸ್ತೆ, ದಕ್ಷಿಣದಿಂದ: ಸರ್ವೆನಂ .86

ಐಟಂಸಂಖ್ಯೆ2: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ವಸತಿ ಖಾಲಿ ಸೈಟ್ ಸಂಖ್ಯೆ 2, ಗ್ರಾಮ ಪಂಚಾಯತ್ ಖಾತಾ ಸಂಖ್ಯೆ 399/02, ಪಿಐಡಿ ಸಂಖ್ಯೆ 152500900901220126, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 09.14 ಮೀಟರ್, ಮತ್ತು ಉತ್ತರದಿಂದ ದಕ್ಷಿಣಕ್ಕೆ: ಪೂರ್ವಕ್ಕೆ: 12.19 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: ಪಶ್ಚಿಮಕ್ಕೆ: 12.09 ಮೀಟರ್ ಸಂಪೂರ್ಣವಾಗಿ 111.41 ಚದರ ಮೀಟರ್ ಅಳತೆ ಹೊಸಹಳ್ಳಿ ಗ್ರಾಮ, ಅರಕೆರೆ ಗ್ರಾಮ ಪಂಚಾಯತ್, ಕೋರಾ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಚಕ್ಕುಬಂದಿ: ಪೂರ್ವದಿಂದ: ಸೈಟ್ ಸಂಖ್ಯೆ 1 ಪಶ್ಚಿಮದಿಂದ: ಸೈಟ್ ಸಂಖ್ಯೆ 03, ಉತ್ತರದಿಂದ: 30 ಅಡಿರಸ್ತೆ, ದಕ್ಷಿಣದಿಂದ: ಸರ್ವೆನಂ. 86 ಹೊಂದಿರುವ ಆಸ್ತಿ.

4.	10365823	ಶ್ರೀಎಂ.ವಿ.ಗಿರೀಶ್ (ಸಾಲಗಾರ) ಶ್ರೀಮತಿ ಎನ್.ಸುಮಲತಾ (ಸಹ ಸಾಲಗಾರ)	ರೂ. 38,37,700/ (ರೂಪಾಯಿ ಮೂವತ್ತೆಂಟು ಲಕ್ಷ ಮೂವತ್ತೇಳು ಸಾವಿರದ ಏಳುನೂರು ಮಾತ್ರ) ದಿನಾಂಕ: ಏಪ್ರಿಲ್ 08, 2019	ರೂ. 12,10,000/-	ರೂ. 1,21,000/-

ಸ್ಥಿರಾಸ್ತಿಯವಿವರಣೆ: ಐಟಂಸಂಖ್ಯೆ 1: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ವಸತಿ ಖಾಲಿ ಸೈಟ್ ಸಂಖ್ಯೆ 14, ಗ್ರಾಮ ಪಂಚಾಯತ್ ಖಾತಾಸಂಖ್ಯೆ 399/14, ಪಿಐಡಿಸಂಖ್ಯೆ 152500900901220140, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: ಉತ್ತರಕ್ಕೆ: 11.79 ಮೀಟರ್, ಪೂರ್ವದಿಂದ ಪಶ್ಚಿಮಕ್ಕೆ: ದಕ್ಷಿಣಕ್ಕೆ: 10.00 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: ಪೂರ್ವಕ್ಕೆ: 12.19 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: ಪಶ್ಚಿಮಕ್ಕೆ: 14.00 ಮೀಟರ್ ಸಂಪೂರ್ಣವಾಗಿ 142.61 ಚದರ ಮೀಟರ್ ಅಳತೆ, ಹೊಸಹಳ್ಳಿಗ್ರಾಮ, ಅರಕೆರೆ ಗ್ರಾಮ ಪಂಚಾಯತ್, ಕೋರಾ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಚಕ್ಕುಬಂದಿ: ಪೂರ್ವದಿಂದ: ಸೈಟ್ ಸಂಖ್ಯೆ 15, ಪಶ್ಚಿಮದಿಂದ: ಸರ್ವೆಸಂಖ್ಯೆ 85/2 ಹೊಂದಿರುವ ಭೂಮಿ, ಉತ್ತರದಿಂದ: ಜಮೀನು ಹೊಂದಿರುವ ಸರ್ವೆನಂ. 26, ದಕ್ಷಿಣದಿಂದ: 9 ಮೀಟರ್ ರಸ್ತೆ.

ಐಟಂಸಂಖ್ಯೆ 2: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ವಸತಿ ಖಾಲಿ ಸೈಟ್ ಸಂಖ್ಯೆ 32, ಗ್ರಾಮ ಪಂಚಾಯತ್ ಖಾತಾಸಂಖ್ಯೆ 399/32, ಪಿಐಡಿಸಂಖ್ಯೆ 152500900901220165, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: ಉತ್ತರಕ್ಕೆ: 15.63 ಮೀಟರ್, ಪೂರ್ವದಿಂದ ಪಶ್ಚಿಮಕ್ಕೆ: ದಕ್ಷಿಣಕ್ಕೆ: 16.89 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: ಪೂರ್ವಕ್ಕೆ: 6.3 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: ಪಶ್ಚಿಮಕ್ಕೆ: 12.07 ಮೀಟರ್, ಸಂಪೂರ್ಣವಾಗಿ 200.57 ಚದರ ಮೀಟರ್‌ಅಳತೆ, ಹೊಸಹಳ್ಳಿ ಗ್ರಾಮ, ಅರಕೆರೆ ಗ್ರಾಮ ಪಂಚಾಯತ್, ಕೋರಾಹೋಬಳಿ, ತುಮಕೂರು ತಾಲ್ಲೂಕು ಮತ್ತು ಚಕ್ಕುಬಂದಿ: ಪೂರ್ವದಿಂದ: ಪಾರ್ಕ್, ಪಶ್ಚಿಮದಿಂದ: ಸೈಟ್ ಸಂಖ್ಯೆ 31, ಉತ್ತರದಿಂದ: ಜಮೀನು ಹೊಂದಿರುವಸರ್ವೆನಂ .86, ದಕ್ಷಿಣದಿಂದ: 9 ಮೀಟರ್ ರಸ್ತೆ

5.	10226222	ಶ್ರೀಭೇರುಲಾಲ್ಜೈನ್ (ಸಾಲಗಾರ) ಮತ್ತು ಶ್ರೀಡಾಕುರೇಶ್ವಂದ್ರ (ಸಹ-ಸಾಲಗಾರ)	12ಏಪ್ರಿಲ್ 2021 ರಂತೆ, ರೂ.50,93,246/-	ರೂ .31,50,000/-	ರೂ .3,15,000/-

ಸ್ಥಿರಾಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗವು ಸೇರಿದಂತೆ ವಸತಿ ಪಶ್ಚಿಮ ಭಾಗ ಯಲಹಂಕ ಹೋಬಳಿಯ ಕೆಂಪಾಪುರ ಗ್ರಾಮದಲ್ಲಿ ನೆಲೆಗೊಂಡಿರುವ ಮನೆ ಆಸ್ತಿ ಸಂಖ್ಯೆ. 4 ಮತ್ತು 5ರ ಭಾಗ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, ಪ್ರಸ್ತುತ ಬೃಹತ್ ಬೆಂಗಳೂರು ವ್ಯಾಪ್ತಿಗೆ ಒಳಪಡುತ್ತದೆ ಮಹಾನಗರಪಾಲಿಕೆ, BBMP ಖಾತಾ ಸಂ.363/513/445ರಲ್ಲಿ (ಹಳೆಯ ಖಾತಾ ಸಂ.513)ಮತ್ತು ಚಕ್ಕುಬಂದಿ: ಪೂರ್ವದಿಂದ: ಅದೇ ಸೈಟಿನ ಉಳಿದ ಭಾಗವು ಸಂಖ್ಯೆ 4 ಮತ್ತು 5 ಅನ್ನು ಹೊಂದಿದೆ. ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಅಳತೆಗಳು, ಶ್ರೀ.ಲೇಖರಾಮ್ ಆರ್ ಜಾಗಿದ್ ಅವರಿಗೆ ಸೇರಿದೆ. ಪಶ್ಚಿಮದಿಂದ: ರಾಮಯ್ಯನ ಜಮೀನು, ಉತ್ತರದಿಂದ: ಸೈಟ್ ನಂ. 2 ಮತ್ತು 3, ದಕ್ಷಿಣದಿಂದ: 20 ಅಡಿರಸ್ತೆ. ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿಗಳನ್ನು ಸಂಪೂರ್ಣವಾಗಿ ಅಳೆಯುವುದು 800 ಚದರ, ಅಡಿ ಅಳತೆ.

6.	9526568	ಶ್ರೀಅಮರೇಂದ್ರ ಬಿಹಾರ್(ಸಾಲಗಾರ) ಮತ್ತು ಶ್ರೀಮತಿ ಲಕ್ಷ್ಮಿ ಜಿಎಂ (ಸಹ-ಸಾಲಗಾರ)	14.07.2021ರಂತೆ ರೂ.5,79,758/- (ರೂಪಾಯಿ ಐದು ಲಕ್ಷ ಎಪ್ಪತ್ತು ಒಂಬತ್ತು ಸಾವಿರ ಏಳುನೂರು ಐವತ್ತೆಂಟು ಮಾತ್ರ)	ರೂ .19,78,000/-	ರೂ .1,97,80/-

ಸ್ಥಿರಾಸ್ತಿಯ ವಿವರಣೆ: ಎಲ್ಲಾ ಭಾಗ ವಿಭಾಗವು ಸೇರಿದಂತೆ ಸ್ವತ್ತಿನ ಖಾತಾ ಜಂಜರ್ ನಂ. 622, ಸೈಟ್ ನಂ..07, ರಲ್ಲಿ "HMR ಗಾಡನ್ ಸಿಟಿ" ಲೇಔಟ್ ಆಸ್ತಿ ಅನನ್ಯ ಸಂ.152200200705120513, ವಸತಿ ಉದ್ದೇಶಕ್ಕಾಗಿ ಪರಕೀಯ ಭೂಮಿಯಲ್ಲಿ ರಚಿಸಲಾಗಿದೆ ಬೇರಿಂಗ್ ಸರ್ವೆ ನಂ.62/8 ಅಳತೆಯ 1 ಎಕರೆ 12 ಗುಂಟಾಗಳು, ಸೈನಂ.62/15, ಅಳತೆಯ 1 ಎಕರೆ 11 ಗುಂಟಾಗಳು ಮತ್ತು ಸೈನಂ. 62/16 ಅಳತೆಯ 1 ಎಕರೆ 11 ಗುಂಟಾಗಳು ಒಟ್ಟು 4 ಎಕರೆ 4 ಗುಂಟಾಗಳು, ಮನುಗನಹಳ್ಳಿ ಗ್ರಾಮ, ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಪೂರ್ವದಿಂದ ಪಶ್ಚಿಮಕ್ಕೆ 12.00 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ (13.25+11.97)/2 ಮೀ. ಮತ್ತು ಚಕ್ಕುಬಂದಿ:- ಪೂರ್ವದಿಂದ: 9 ಮೀಟರ್ ರಸ್ತೆ, ಪಶ್ಚಿಮದಿಂದ: ಸೈಟ್ ನಂ..10, ಉತ್ತರದಿಂದ: ಸೈನಂ.62/7, ದಕ್ಷಿಣದಿಂದ: ಸೈಟ್ ನಂ..8. ಹರಾಜಿನಲ್ಲಿ, ಸಾರ್ವಜನಿಕರಿಗೆ ಸಾಮಾನ್ಯವಾಗಿ ತಮ್ಮ ಬಿಡ್ (ಗಳನ್ನು) ವೈಯಕ್ತಿಕವಾಗಿ ಸಲ್ಲಿಸಲು ಆಹ್ವಾನಿಸಲಾಗುತ್ತದೆ. ಸಾಲಗಾರ (ರು) / ಸಹ-ಸಾಲಗಾರ(ರು) ಈ ನೋಟಿಸ್ ಪ್ರಕಟವಾದ ದಿನಾಂಕದಿಂದ 15 ದಿನಗಳಲ್ಲಿ ಒಟ್ಟು ಬಾಕಿ ಮೊತ್ತವನ್ನು ಹೆಚ್ಚಿನ ಬಡ್ಡಿಯೊಂದಿಗೆ ಪಾವತಿಸಲು ಕೊನೆಯ ಅವಕಾಶವನ್ನು ನೀಡಲಾಗಿದೆ, ವಿಫಲವಾದರೆ ಸ್ಥಿರ ಆಸ್ತಿಯನ್ನು ಶೆಡ್ಯೂಲ್ ಪ್ರಕಾರ ಮಾರಾಟ ಮಾಡಲಾಗುತ್ತದೆ. ಬಡ್ಡಿ ಮತ್ತು ವೆಚ್ಚಗಳೊಂದಿಗೆ (ಮಾರಾಟದ ವೆಚ್ಚವನ್ನು ಒಳಗೊಂಡಂತೆ) ಮೇಲೆ ತಿಳಿಸಿದ ಮೊತ್ತವನ್ನು ಪಾವತಿಸಿದರೆ ಅಥವಾ ಅಂತಹ ಸುರಕ್ಷಿತ ಸಾಲ, ಬಡ್ಡಿ ಮತ್ತು ವೆಚ್ಚಗಳನ್ನು ಪುರಾವೆಯೊಂದಿಗೆ ಅಧಿಕೃತ ಅಧಿಕಾರಿಗೆ ಹರಾಜಿನ ದಿನಾಂಕದ ಮೊದಲು ತಿಳಿಸಿದರೆ ಈ ಹರಾಜನ್ನು ನಿಲ್ಲಿಸಲಾಗುತ್ತದೆ ಈ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನುಹೊಂದಿರುವ ಯಾವುದೇ ಅಧಿಕಾರಿ ಅಥವಾ ಇತರ ವ್ಯಕ್ತಿ, ಮಾರಾಟವಾದ ಸ್ಥಿರಆಸ್ತಿಯಲ್ಲಿ ಯಾವುದೇ ಆಸಕ್ತಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಬಿಡ್ ಮಾಡುವುದು, ಸ್ವಾಧೀನಪಡಿಸಿಕೊಳ್ಳುವುದು ಅಥವಾ ಪಡೆಯಲುಪ್ರಯತ್ನಿಸುವುದಿಲ್ಲ.

ಮಾರಾಟವು ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರಲ್ಲಿಸೂಚಿಸಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಈ ಕೆಳಗಿನ ಹೆಚ್ಚಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ: ಇ-ಹರಾಜು30ನೇ ಮಾರ್ಚ್2022 (ಹರಾಜುದಿನಾಂಕ) ರಂದು https://bankauctions.in/ ಪೋರ್ಟಲ್ ಮೂಲಕ ಮಧ್ಯಾಹ್ನ 2.00 ರಿಂದ ಮಧ್ಯಾಹ್ನ 3.00 ರವರೆಗೆ ತಲಾ 10 ನಿಮಿಷಗಳ ಸೀಮಿತ ವಿಸ್ತರಣೆಯೊಂದಿಗೆ ನಡೆಯಲಿದೆ.

ನಿಯಮ ಮತ್ತು ಷರತ್ತುಗಳು: 1. ಕೆಳಗಿನ ಶೆಡ್ಯೂಲ್‌ನಲ್ಲಿ ಕೆಳಸಹಿದಾರರು ಅಧಿಕೃತ ಅಧಿಕಾರಿಯ ಉತ್ತಮ ಜ್ಞಾನ ಮತ್ತು ಮಾಹಿತಿಗೆ, ಸ್ವತ್ತಿಗೆ ಸಂಬಂಧಿಸದಂತೆ ಯಾವುದೇ ಅಡಚಣೆ ಇಲ್ಲ, ಆದರೆ ಈ ಘೋಷಣೆಯಲ್ಲಿ ಯಾವುದೇ ದೋಷ, ತಪ್ಪು ವಿವರಣೆ ಅಥವಾ ಲೋಪಕ್ಕೆ ಕೆಳ ಸಹಿದಾರರು ಉತ್ತರಿಸಲಾಗುವುದಿಲ್ಲ. ಮೊತ್ತದ ಬಿಡ್ ಅಥವಾ ಬಿಡ್ಡಾರರ ಬಗ್ಗೆ ಯಾವುದೇ ವಿವಾದ ಉಂಟಾದಾಗ, ಸುರಕ್ಷಿತ ಸಾಲಗಾರನ ವಿವೇಚನೆಗೆ ಒಳಪಟ್ಟು ಲಾಟ್ ಅನ್ನು ಮತ್ತೊಮ್ಮೆ ಹರಾಜಿಗೆ ಇಡಲಾಗುತ್ತದೆ. 2. ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. 3. ಬಿಡ್ ಹೆಚ್ಚಳದ ಮೊತ್ತ ಹೀಗಿರುತ್ತದೆ: ರೂ .10,000/- (ಹತ್ತು ಸಾವಿರಮಾತ್ರ) 4. ಆಸ್ತಿಯ ಖರೀದಿಗೆ ಸಲ್ಲಿಸಿದ ಎಲ್ಲಾ ಬಿಡ್‌ಗಳು ಡಿಮ್ಯಾಂಡ್ ಡ್ರಾಫ್ಟ್‌ನ ಮೂಲಕ ಮೇಲೆ ತಿಳಿಸಿದಂತೆ ಅರ್ನೆಸ್ಟ್ ನಿಮ್ಮ ಜೊತೆಗೂಡಿರುತ್ತವೆ ಫಲಾನುಭವಿ "ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್." ಪಾವತಿಸಬೇಕಾದ ಶಾಖೆಯ ವಿಳಾಸ. ಸಂಖ್ಯೆ 82/1, ನೆಲಮಹಡಿ, ಕೃಷ್ಣಾಟವರ್ಸ್, ರಿಚ್ಮಂಡ್ರಸ್ತೆ, ಬೆಂಗಳೂರು - 560025. ಡಿಮ್ಯಾಂಡ್ ಡ್ರಾಫ್ಟ್‌ಗಳನ್ನುಹರಾಜಿನ ನಂತರ ವಿಫಲ ಬಿಡ್‌ದಾರರಿಗೆ ಹಿಂತಿರುಗಿಸಲಾಗುತ್ತದೆ. 5. ಅತ್ಯಧಿಕ ಬಿಡ್ದಾರನನ್ನು ಅವನು/ಅವಳು ಕಾನೂನುಬದ್ಧವಾಗಿ ಬಿಡ್ ಮಾಡಲು ಅರ್ಹತೆ ಹೊಂದಿದ್ದರಿಂದ ಯಶಸ್ವಿ ಬಿಡ್‌ದಾರ ಎಂದು ಘೋಷಿಸಲಾಗುತ್ತದೆ ಮತ್ತು ಮೊದಲೇ ಹೇಳಿದಂತೆ ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. ನೀಡಿರುವ ಬೆಲೆ ಸ್ಪಷ್ಟವಾಗಿ ಅಸಮರ್ಪಕವಾಗಿ ಕಾಣಿಸಿಕೊಂಡಾಗ ಅತ್ಯಧಿಕ ಬಿಡ್‌ನ ಸ್ವೀಕಾರವನ್ನು ನಿರಾಕರಿಸುವುದು 'ಅಧಿಕೃತ ಅಧಿಕಾರಿ'ಯ ವಿವೇಚನೆಗೆ ಒಳಪಟ್ಟಿರುತ್ತದೆ. 6. ದಾಖಲಾದ ಕಾರಣಗಳಿಗಾಗಿ, ಮಾರಾಟವನ್ನು ಮುಂದೂಡುವುದು/ನಿಲ್ಲಿಸುವುದು ಅಧಿಕೃತ ಅಧಿಕಾರಿಯ ವಿವೇಚನೆಯಲ್ಲಿರುತ್ತದೆ. 7. ಸ್ಥಿರ ಆಸ್ತಿಯ ಪರಿಶೀಲನೆಯನ್ನು 23ನೇ ಮಾರ್ಚ್2022ರಂದು ಬೆಳಿಗ್ಗೆ 11 ರಿಂದ ಸಂಜೆ 5.00 ರವರೆಗೆ ಮಾಡಬಹುದು. 8. ಯಶಸ್ವಿ ಬಿಡ್ದಾರನಾಗಿ ಘೋಷಿಸಲ್ಪಟ್ಟ ವ್ಯಕ್ತಿಯು, ಅಂತಹಘೋಷಣೆಯಾದಕೂಡಲೇ, ಖರೀದಿಯಹಣ/ಬಿಡ್‌ನ ಇಪ್ಪತ್ತೈದು ಶೇಕಡಾವನ್ನು ಠೇವಣಿ ಇಡಬೇಕು, ಅದು ಇಎಂಡಿ ಮೊತ್ತದ ಜೊತೆಗೆ ಅಧಿಕೃತ ಅಧಿಕಾರಿಗೆ 24 ಗಂಟೆಗಳ ಒಳಗೆ ಒಳಗೊಂಡಿರುತ್ತದೆ. ನಿಗದಿತ ಅವಧಿಯೊಳಗೆ ಮೊತ್ತವನ್ನು ಠೇವಣಿ ಇಡುವುದರಲ್ಲಿ ಯಾವುದೇ ವಿಫಲರಾದಲ್ಲಿ, ಆಸ್ತಿಯನ್ನು ಖಾಸಗಿ ಒಪ್ಪಂದದ ಮೂಲಕ ಹೊಸ ಹರಾಜು/ಮಾರಾಟಕ್ಕೆ ಇಡಲಾಗುತ್ತದೆ. 9. ಒಂದುವೇಳೆ ಪ್ರಾಂಭಿಕ ಠೇವಣಿ ಮೇಲಿನಂತೆ ಮಾಡಿದರೆ, ಪಾವತಿಸಬೇಕಾದ ಖರೀದಿ ಹಣದ ಬಾಕಿ ಮೊತ್ತವನ್ನು ಖರೀದಿದಾರನು ಅಧಿಕೃತ ಅಧಿಕಾರಿಗೆ ಆಸ್ತಿ ಮಾರಾಟದ ದೃಢೀಕರಣದ ದಿನಾಂಕದಿಂದ 15 ನೇ ದಿನದ ಅಥವಾ ಮೊದಲು ಪಾವತಿಸಬೇಕು, ಅಥವಾ 15ನೇ ದಿನ ಭಾನುವಾರ ಅಥವಾ ಇತರ ರಜಾ ದಿನವಾಗಿದ್ದರೆ, ಮೊದಲ ಕಚೇರಿ ದಿನದಂದು ಪಾವತಿಸಬೇಕು. 10. ಮೇಲೆ ತಿಳಿಸಿದ ಅವಧಿಯೊಳಗೆ ಯಾವುದೇ ಪಾವತಿಸಲು ವಿಫಲವಾದರೆ, ಖಾಸಗಿ ಒಪ್ಪಂದದ ಮೂಲಕ ಆಸ್ತಿಯನ್ನು ಹೊಸ ಹರಾಜು / ಮಾರಾಟಕ್ಕೆ ಇಡಲಾಗುತ್ತದೆ. ಇಎಂಡಿ ಸೇರಿದಂತೆ ಠೇವಣಿ ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಮಿಟೆಡ್‌ನಿಂದ ಮುಟ್ಟುಗೋಲು ಹಾಕಿಕೊಳ್ಳುತ್ತದೆ ಮತ್ತು ಡೀಫಾಲ್ಟ್ ಖರೀದಿದಾರನು ಆಸ್ತಿಗೆ ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುತ್ತಾನೆ. 11. ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಮಿಟೆಡ್‌ಗೆ ತಿಳಿದಿರುವ ಯಾವುದೇ ಆಸ್ತಿಗಳ ವಿವರಗಳು, ಆಸ್ತಿಗೆ ಹೊಣೆಗಾರರಾಗಿರುತ್ತಾರೆ: ಇಲ್ಲ. **ಹಕ್ಕುಗಳು, ಯಾವುದಾದರೂ ಇದ್ದರೆ, ಅದನ್ನು ಆಸ್ತಿಗೆ ಮುಂದಿಡಲಾಗಿದೆ ಮತ್ತು ಅದರ ಸ್ವರೂಪ ಮತ್ತು ಮೌಲ್ಯವನ್ನು ಹೊಂದಿರುವ ಯಾವುದೇ ಇತರ ವಿವರಗಳು: ಇಲ್ಲ. ಆಸ್ತಿ ತೆರಿಗೆ, ವಿದ್ಯುತ್ ಇತ್ಯಾದಿಗಳ ಶಾಸನ ಬದ್ಧಹೊಣೆಗಾರಿಕೆಗಳು ಸೇರಿದಂತೆ ಆಸ್ತಿಯ ಮೇಲಿನ ವಿವರಗಳ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆ ನಡೆಸಲು ಉದ್ದೇಶಿತ ಬಿಡ್‌ದಾರರಿಗೆ ಸೂಚಿಸಲಾಗಿದೆ. 12. ಬೇರೆ ಯಾವುದೇ ವಿವರಗಳಿಗಾಗಿ ಅಥವಾ ಇ-ಹರಾಜಿನ ಕಾರ್ಯ ವಿಧಾನದ ಆನ್‌ಲೈನ್ ತರಬೇತಿಗಾಗಿ ನಿರೀಕ್ಷಿತ ಬಿಡ್‌ದಾರರು ಸೇವಾ ಪೂರೈಕೆದಾರ M/s. 4 ಕ್ಲೋಸರ್, ಬ್ಲಾಕ್ ನಂ.605 ಎ, 6ನೇಮಹಡಿ, ಮೈತ್ರಿವನಂ ವಾಣಿಜ್ಯ ಸಂಕೀರ್ಣ, ಅಮೀರ್‌ಪೇಟ್, ಹೈದರಾಬಾದ್ - 500038 ಇದರ ಸಂಯೋಜಕರಾದ ಶ್ರೀಯು.ಸುಬ್ಬರಾವ್, ಮೊ. ಸಂ.8142000061, subbarao@bankauctions.in** ಸಂಪರ್ಕಿಸಬಹುದು ಅಥವಾ ಅರಿಜಿತ್ ಭಟ್, ಇಮೇಲ್‌ಐಡಿ: Arijit.bhatt@tatacapital.com ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ 9029073280. ದಯವಿಟ್ಟು ನಿಮ್ಮ ಪ್ರಶ್ನೆಯನ್ನು ವಾಟ್ಸಾಪ್ ಸಂಖ್ಯೆ - 9029073280 ಗೆಕಳುಹಿಸಿ. 13. ಮೇಲಿನ ವಿವರಗಳಿಗಾಗಿ ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್https://bit.ly/3hWjTq8ಯಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ.

ದಯವಿಟ್ಟು ಗಮನಿಸಿ- ಈ ಆಸ್ತಿಯ ಮಾರಾಟ/ಹರಾಜಿನಲ್ಲಿ ಪ್ರಸ್ತಾಪಿಸಲಾದ ಹರಾಜು ಪಾಲುದಾರನನ್ನು ಹೊರತುಪಡಿಸಿ ಯಾವುದೇ ಬ್ರೋಕರ್/ಏಜೆಂಟರನ್ನು ಟಿಸಿಎಚ್‌ಎಫ್ ಎಲ್ಲೂ ತೊಡಗಿಸಿಕೊಂಡಿಲ್ಲ. ಆಸಕ್ತ ವ್ಯಕ್ತಿಗಳು ಈ ವಿಷಯದಲ್ಲಿ ಎಲ್ಲಾ ಪ್ರಶ್ನೆಗಳು ಮತ್ತು ವಿಚಾರಣೆಗಾಗಿ ಕೆಳ ಸಹಿದಾರರು ಅಥವಾಅಧಿಕೃತ ಅಧಿಕಾರಿಯನ್ನು ಮಾತ್ರ ಸಂಪರ್ಕಿಸಬೇಕು.

ಸಹಿ/ -
ಶ್ರೀಅರಿಜಿತ್ ಭಟ್, ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.,
ಮೊಬೈಲ್: 9029073280

ದಿನಾಂಕ- 12.03.2022
ಸ್ಥಳ: -ಬೆಂಗಳೂರು